**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

**MVC No. 1681/2024**

**ಸಾಕ್ಷಿಯನ್ನು ದಿಃ 05.01.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ SBS ವಕೀಲರಿಂದಃ-**

ನಾನು ವ್ಯವಸಾಯ ಮಾಡುತ್ತೇನೆ. 1, 3 ಮತ್ತು 4ನೇ ಅರ್ಜಿದಾರರನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ತಂದೆ ನೋಡಿಕೊಳ್ಳುತ್ತಿದ್ದರು. 3ನೇ ಅರ್ಜಿದಾರರಿಗೆ ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಿದ್ದಾರೆ. 1ನೇ ಅರ್ಜಿದಾರರಿಗೆ ಈಗ 66 ವರ್ಷ. ಈಗ ಅವರನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ಅಪಘಾತದ ಸಮಯದಲ್ಲಿ ನನ್ನ ತಂದೆಗೆ 72 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ನನ್ನ ತಾಯಿಯನ್ನು ನಾನು ಮತ್ತು 4ನೇ ಅರ್ಜಿದಾರರು ನೋಡಿಕೊಳ್ಳುತ್ತಿದ್ದೇವೆ ಎಂದರೆ ಈಗ ನಾವು ನೋಡಿಕೊಳ್ಳುತ್ತಿದ್ದೇವೆ. 1ನೇ ಅರ್ಜಿದಾರರನ್ನು ನಾನು ಮತ್ತು 4ನೇ ಅರ್ಜಿದಾರರು ನೋಡಿಕೊಳ್ಳುತ್ತಿರುವ ಕಾರಣ ಅವರಿಗೆ ಯಾವುದೇ ಕೊರತೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಬಿ.ಪಿ ಮತ್ತು ಶುಗರ್ ಇದೆ. ಅಪಘಾತದ ಸಮಯದಲ್ಲಿ ನನ್ನ ತಂದೆಗೆ 72 ವರ್ಷ ವಯಸ್ಸಾಗಿದ್ದರಿಂದ ಅವರಿಗೆ ಯಾವುದೇ ದುಡಿಮೆ ಇರಲಿಲ್ಲ ಎಂದರೆ ಸರಿಯಲ್ಲ. ಕೃಷಿ ಮಾಡುತ್ತಿದ್ದರು. ನನ್ನ ತಂದೆಗೆ ಪಿಂಚಣಿ ಬರುತ್ತಿತ್ತು ಎಂದು ತೋರಿಸುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನನ್ನ ತಂದೆಯ ಮರಣಾನಂತರ 1ನೇ ಅರ್ಜಿದಾರರಿಗೆ ಎಷ್ಟು ಪಿಂಚಣಿ ಬರುತ್ತಿದೆ ಎಂಬ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನನ್ನ ತಂದೆಯ ಮರಣದಿಂದ ಅರ್ಜಿದಾರರಾದ ನಮಗೆ ಯಾವುದೇ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 4ನೇಅರ್ಜಿದಾರರು ವಯಸ್ಕರಾಗಿ ತಂದೆ ತಾಯಿಯನ್ನು ನಾವೇ ನೋಡಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ.

ನಾನು ಅಪಘಾತವನ್ನು ನೋಡಿಲ್ಲ ಎಂದರೆ ನೋಡಿದ್ದೇನೆ. ಆ ದಿನ ನನ್ನ ತಂದೆ ಚಲಾಯಿಸುತ್ತಿದ್ದ ಸುಜುಕಿ ಸ್ಕೂಟರ್ ತಂದೆಗೆ ಸೇರಿತ್ತು. ಅಪಘಾತದ ದಿನದಂದು ನನ್ನ ತಂದೆಯ ಸ್ಕೂಟರ್ ಗೆ ನೋಂದಣಿ ಪತ್ರ ಮತ್ತು ವಿಮೆ ಇದ್ದ ಬಗ್ಗೆ ಮತ್ತು ನನ್ನ ತಂದೆಯ

ಬಳಿ ಡಿಎಲ್ ಇದ್ದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ಅಪಘಾತದ ಸಮಯದಲ್ಲಿ ನನ್ನ ತಂದೆ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ನಿಂತಿದ್ದ ಲಾರಿಯ ಹಿಂಬದಿಗೆ ನನ್ನ ತಂದೆ ಸ್ವತಃ ಡಿಕ್ಕಿ ಮಾಡಿದ ಪರಿಣಾಮ ಅಪಘಾತವಾಗಿದೆ ಎಂದರೆ ಸರಿಯಲ್ಲ. ಲಾರಿ ಚಾಲಕನ ಮೇಲೆ ಪೋಲಿಸರು ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಿಃ 10.02.2024ರಂದು ಅಪಘಾತವಾಗಿದೆ. ದಿಃ 22.02.2024ರಂದು ನನ್ನ ತಂದೆ ಮೃತಪಟ್ಟರು. ನನ್ನ ತಂದೆ 12 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ಆ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ವಯೋ ಸಹಜ ಕಾರಣದಿಂದ ತೀರಿ ಹೋಗಿದ್ದಾರೆ ಎಂದರೆ ಸರಿಯಲ್ಲ. ಅದನ್ನು ದುರುಪಯೋಗಪಡಿಸಿಕೊಂಡು ಲಾರಿ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ದೂರನ್ನು ನೀಡಿ, ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ನಾವು ವೈದ್ಯರೊಂದಿಗೆ ಶಾಮಿಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮಾಡುತ್ತೇನೆ ಎಂಬ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ,**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.